Sri M. V. KRISHNAPPA.—Sir, I move:

"That the Mysore Famine Relief Fund Bill, 1962, be passed."

Mr. SPEAKER.—The question is:

"That the Mysore Famine Relief Fund Bill, 1962, be passed"

The motion was adopted.

5-30 P.M.

MYSORE PRISONS BILL, 1962.

Motion to consider.

(*Debate continued.*)

Mr. SPEAKER.—The Mysore Prisons Bill may be taken now. The time allotted for this Bill is 210 minutes of which 105 minutes have already been spent and five members have participated and the fifth member has already taken 20 minutes. Therefore, I would request the fifth member to conclude expeditiously

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಸ್ವಾಮಿ, ಬಂದೀಖಾನೆ ವಿಷಯದಲ್ಲಿ ಈ ಮಸೂದೆಯೊಳಗೆ ಏನೇನೂ ಇಲ್ಲ. ಇನ್ನೊಂದು ಕಾನೂನು ತೆಗೆದುಕೊಂಡು ಕಾಪಿ ಮಾಡಿದ ಹಾಗೆ ಇದೆ. 1941ರಲ್ಲಿ ಮೈಸೂರು ಸಂಸ್ಥಾನದಲ್ಲಿ ಪ್ರಿಜನ್ ರಿಫಾರ್ಮ್ಸ್ ಯಾವ ರೀತಿ ಮಾಡಬೇಕು ಎಂಬುದಕ್ಕೆ ಒಂದು ಕಮಿಟಿ ನೇಮಕ ಮಾಡಿದ್ದರು. ಅವರು ಒಂದು ಗಹನವಾದ ರಿಪೋರ್ಟನ್ನು ಕೊಟ್ಟಿದ್ದಾರೆ. ಆ ರಿಪೋರ್ಟಿನಲ್ಲಿ ಹೇಳಿದ ಅಂಶಗಳು ಈ ಮಸೂದೆಯಲ್ಲಿ ಕಾಣುವುದಿಲ್ಲ. ಬಂದಿಯನ್ನು ಹೇಗೆ ಹಿಡಿದುಕೊಂಡು ಬರಬೇಕು, ಜೇಲರ್ ಹೇಗೆ ಇರಬೇಕು, ಏನು ಕೆಲಸ ಕೊಡಬೇಕು ಪರೋಲ್ ಮೇಲೆ ಬಿಡುವುದು ಹೇಗೆ ಇಷ್ಟೇ ಇದೆ. ಡಾಯಟ್ ಹೇಗೆ ಇರಬೇಕು, ಬಟ್ಟೆ ಎಂಥದು ಕೊಡಬೇಕು ಯಾವ ಕೆಲಸ ತೆಗೆದುಕೊಳ್ಳಬೇಕು, ಬಂದಿ ಹೊರಗೆ ಹೋದ ಮೇಲೆ ರಿಹ್ಯಾಬಿಲಿಟೇಟ್ ಹೇಗೆ ಮಾಡಬೇಕು ಎಂಬ ಬಗ್ಗೆ ಒಂದು ಪದ ಕೂಡ ಇದರಲ್ಲಿ ಇಲ್ಲ. ಇಂಥ ಕಾನೂನನ್ನು ಶಾಸನ ಕಡಿತಕ್ಕೆ ಏತಕ್ಕೆ ಏರಿಸುತ್ತೀರಿ ಎಂದು ಕೇಳುತ್ತೇನೆ. ಈ ಮಸೂದೆಯ ಉದ್ದೇಶವೇನು? ಜೇಲ್ ರಿಫಾರ್ಮ್ ಮಾಡಿ ಸಮಾಜದಲ್ಲಿ ಒಳ್ಳೆಯದು ಆಗಬೇಕೆಂದು ಮಾಡುತ್ತೀರಾ? ಕೈದಿಯು ಸತ್ಪ್ರಜೆಯಾಗುವ ಹಾಗೆ ಈ ಬಿಲ್ಲಿನಲ್ಲಿ ಏನಾದರೂ ಅಡಕವಾಗಿದೆಯೇ ಎಂದರೆ ಅಂಥಾದ್ದು ಏನೇನೂ ಇಲ್ಲ. 1941ರಲ್ಲಿ ನೇಮಕ ಮಾಡಲಾಗಿದ್ದ ರಿಫಾರ್ಮ್ಸ್ ಕಮಿಟಿಯವರು ತಮ್ಮ ವರದಿಯಲ್ಲಿ ಈ ವಿಷಯವನ್ನು ಕೂಲಂಕಷವಾಗಿ ಚರ್ಚೆ ಮಾಡಿದ್ದಾರೆ. ಎಂಥ ಬಟ್ಟೆ, ಯಾವ ಡಾಯಟ್, ಯಾವ ಕೆಲಸ ಮಾಡಬೇಕು, ರಿಹ್ಯಾಬಿಲಿಟೇಟ್ ಹೇಗೆ ಮಾಡುವುದು ಇವೆಲ್ಲಾ ಆ ರಿಪೋರ್ಟಿನಲ್ಲಿವೆ.

Sri B. D. JATTI.—After the receipt of the Report, after 1942, Government has accepted a number of recommendations and they have also passed orders. There are number of Government Orders. If the Hon'ble Member cares to go through the G.Os., he will not criticise

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇವರು ಮುಖ್ಯ ಮಂತ್ರಿಗಳಾದ ಮೇಲೆ, ಪ್ರಿಜನ್ಸ್ ಇವರ ಅಧಿಕಾರಕ್ಕೆ ಬಂದ ಮೇಲೆಯಾದರೂ ಇವರು ಈ ವರದಿಯನ್ನು ಓದಿದ್ದಾರೆಯೇ? ಇಂಥ ಗೌರ್ನಮೆಂಟ್ ಆರ್ಡರ್ ಮಾಡಿದ್ದೇವೆ, ಇಂಥ ರೆಕಮೆಂಡೇಷನ್ಸ್ ಇಂಪ್ಲಿಮೆಂಟ್ ಮಾಡಿದ್ದೇವೆ ಎಂಬುದನ್ನು ಒಂದು ಪುಸ್ತಕ ಮಾಡಿ ನಮಗೆ ಕೊಟ್ಟರೆ ಒಳ್ಳೆಯದು. ಆದರೆ ಬರೀ ಮಾತನಾಡಿ ಬಿಡುತ್ತಾರೆ ಎಂದು ಹೇಳುತ್ತೇನೆ. ಇಂಥಾದ್ದು ಮಾತನಾಡಿದರೆ ಏನೂ ಪ್ರಯೋಜನವಿಲ್ಲ. ಇದು ಹೇಗಿದೆ ಎಂದರೆ, 'ಅತ್ತೆ ಅಟ್ಟಕ್ಕೆ ಏರು ಎಂದು ಹೇಳಿದರೆ ಮಾವ ಕೆಳಕ್ಕೆ ಹಾರಲು ಹೇಳಿದ' ಎನ್ನುವ ಗಾದೆಯ ಹಾಗೆ ಆಗಿದೆ. ಈ ಮಸೂದೆಯಲ್ಲಿ ಏನು ಹೇಳಿದ್ದಾರೆ ಎನ್ನುವುದನ್ನು ಅಭ್ಯಾಸಿಸಿಕೊಂಡು ಬಂದಿದ್ದೇನೆ. ಆ ರಿಪೋರ್ಟಿನಲ್ಲಿ ಯಾವ ಯಾವ ರಿಫಾರ್ಮ್ಸ್ ಜಾರಿಗೆ ತರಬೇಕು ಸ್ವಾಮಿ,

ಅದು ಯಾವ ಗವರ್ನ್‌ಮೆಂಟ್ ಆರ್ಡರ್ ಎನ್ನುವುದನ್ನು ಸದಸ್ಯರ ಅವಗಾಹನೆಗಾಗಿ ಅಸೆಂಬ್ಲಿಯ ಟೇಬಲ್ ಮೇಲೆ ಇಟ್ಟರೆ ಒಳ್ಳೆಯದಲ್ಲವೇ? ಸುಮ್ಮನೆ ಟೀಕೆ ಮಾಡಬೇಡಿ ಅಂದರೆ ನಾನು ಸರ್ವಥಾ ಒಪ್ಪುವುದಿಲ್ಲ.

ಜೈಲಿನಿಂದ ಬಂದ ಮೇಲೆ ಮತ್ತೆ ಅಲ್ಲಿಯೇ ಹೋಗುತ್ತಾನೆ ಅಂದರೆ ಏನು ಸ್ವಾಮಿ? ಮೈಸೂರು ಸಂಸ್ಥಾನದಲ್ಲಿ 'ಡಿಸ್ಚಾರ್ಜ್ಡ್ ಪ್ರಿಜನರ್ಸ್ ಏಡ್ ಸೊಸೈಟಿ ಎಂದು ಇದೆ. ಅದು ಈ ಮಸೂದೆಯಲ್ಲಿ ಅಡಕವಾಗಬೇಕಾಗಿತ್ತು. ಜೈಲಿನಿಂದ ಆಚೆಗೆ ಬಂದ ಮೇಲೆ ಅವನ ನಡೆ ನುಡಿ ಹೇಗೆ ಇರಬೇಕು ಎನ್ನುವುದಕ್ಕೆ ಇದರಲ್ಲಿ ಒಂದು ಶಬ್ದ ಕೂಡ ಇಲ್ಲ. ಈ ಬಿಲ್ಲನ್ನು ವಾಪಸ್ ತೆಗೆದುಕೊಂಡು ಬಿಡಿ ಎಂದು ಹೇಳುತ್ತೇನೆ. ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಇಂದಿನ ವಾತಾವರಣಕ್ಕೆ ಈ ಕಾನೂನು ಸರಿಯಾಗಿಲ್ಲ. ಐದು ಭಾಗಗಳಲ್ಲಿಯ ಬೇರೆ ಬೇರೆ ಕಾನೂನುಗಳನ್ನು ಕ್ರೋಢೀಕರಿಸುತ್ತೇವೆಂದು ಅನೇಕ ಕಾನೂನುಗಳನ್ನು ತಂದ ಹಾಗೆ ಇದನ್ನೂ ತಂದಿದ್ದೀರಿ. ಬರೀ ಮಕ್ಕೀಕಾಮಕ್ಕಿ ಕಾನೂನನ್ನು ಮಾಡಿ ಇಟ್ಟಿದ್ದೀರಿ. ಇದು ಸರಿಯಲ್ಲ.

Mr. SPEAKER.—That is beyond the scope of this Bill.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಆ ರಿಫಾರ್ಮ್ಸ್ ಕಮಿಟಿ ರಿಪೋರ್ಟನ್ನು ಸಂಬಂಧಪಟ್ಟ ಮಂತ್ರಿಗಳು ಓದಬೇಕಾಗಿತ್ತು. ಇನ್ನೂ ಹೆಚ್ಚಿನ ಅಂಶಗಳನ್ನು ಇದರಲ್ಲಿ ಸೇರಿಸಬೇಕಾಗಿತ್ತು. ಅದನ್ನು ಮಾಡಲಿಲ್ಲ. ಅರಬರೆ ಮನಸ್ಸಿನಿಂದ ಈ ಮಸೂದೆಯನ್ನು ತಂದಿದ್ದೀರಿ. ಇದು ಸರಿಯಲ್ಲ. ಎರಡನೇ ಸಾರಿ ಶಿಕ್ಷೆಯಾದರೆ ಅಂಥವನಿಗೆ ಪಂಚರಂಗೀ ಎಂದು ಕರೆಯುತ್ತಾರೆ. ಈ ಮಸೂದೆಯಲ್ಲಿ ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳುತ್ತೇನೆ.

ಅವನನ್ನು ರೀಹ್ಯಾಬಿಲಿಟೇಟ್ ಮಾಡುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ? ಪ್ರಿಸನರ್ಸ್ ಸೊಸೈಟಿಯಲ್ಲಿ ನೂರು ಜನ ಷೇರ್ ಹೋಲ್ಡರುಗಳು ಇದ್ದಾರೆ. ನೂರು ಷೇರ್ಸ್ ಇವೆ ಎಂದು ಹೇಳುತ್ತೀರಿ ಅದು ಕೆಲಸ ಮಾಡುತ್ತಿದೆಯೇ? ಮೈಸೂರು ಸಂಸ್ಥಾನದಲ್ಲಿ ಎಷ್ಟು ಜನ ಡಿಸ್‌ಚಾರ್ಜ್ಡ್ ಪ್ರಿಸನರ್ಸ್ ಇದ್ದಾರೆ, ಯಾವ ಯಾವ ಹುದ್ದೆಗಳಲ್ಲಿ ಅವರನ್ನು ನೇಮಕ ಮಾಡಿದ್ದೀರಿ ಅವರು ಯಾವ ರೀತಿ ಜೀವನ ಮಾಡುತ್ತಿದ್ದಾರೆ ಎಂಬುದನ್ನು ತೋರಿಸುತ್ತೀರಾ? ಇಲ್ಲ. ಹೋಗಲಿ ಈ ಬಗ್ಗೆ ಏನಾದರೂ ಒಂದು ಸರ್ವೇ ಮಾಡಿದ್ದೀರಾ? ಸೊಸೈಟಿಯಲ್ಲಿ ಫೋರ್ಜರಿ ಮಾಡಿ ಹಣ ತಿಂದವರು, ತಲೆ ಹೊಡೆದವರು, ಲೂಟಿ ಮಾಡಿದವರು, ಖೂನಿ ಮಾಡಿದವರು, ದರೋಡೆ ಮಾಡಿದವರು, ಡಕಾಯಿತಿ ನಡೆಸಿದವರು ಇಂಥವರೆಲ್ಲಾ ಇದ್ದಾರೆ. ಬಂದಿಖಾನೆಯಿಂದ ಆಚೆಗೆ ಬಂದ ಮೇಲೆ ಈ ಕಲ್ಯಾಣ ರಾಜ್ಯದಲ್ಲಿ ಅವರು ಸುಖವಾಗಿ ಬಾಳುವುದಕ್ಕೆ ಏನಾದರೂ ಮಾಡಿದ್ದೀರಾ ಎಂದರೆ ಅಂತಹ ಏರ್ಪಾಡು ಈ ಜೈಲಿನಲ್ಲಿ ಏನೇನೂ ಇಲ್ಲ. ತಪ್ಪು ಮಾಡಿದ್ದಕ್ಕೆ ಶಿಕ್ಷೆ ಆಯಿತು, ಇಷ್ಟು ದಿವಸ ಜೈಲಿನಲ್ಲಿ ಇಟ್ಟುಕೊಂಡಿದ್ದೆವು ಆ ಮೇಲೆ ಬಿಟ್ಟೆವು ಅವನು ಏನು ಬೇಕಾದರೂ ಮಾಡಿಕೊಳ್ಳಬಹುದು ಇಷ್ಟು ಮಾಡುವುದಾದರೆ ಇದು ಸುಖೀ ರಾಜ್ಯ, ರಾಮ ರಾಜ್ಯ, ಕಲ್ಯಾಣ ರಾಜ್ಯ ಅಲ್ಲ. ಸುಖೀ ರಾಜ್ಯದಲ್ಲಿ ಬಂಧಿತರ ಮತ್ತು ಬಂದೀಖಾನೆಗಳಿಗೆ ಅನ್ವಯವಾಗುವಂತಹ ಶಾಸನ ಇದು ಅಲ್ಲ ಎಂದು ಹೇಳುತ್ತೇನೆ. ಒಂದು ವಿಷಯವನ್ನು ಹೇಳುತ್ತೇನೆ ಅಮೆರಿಕನ್ ಅಕೆಡಮಿ ಆಫ್ ಪೊಲಿಟಿಕಲ್ ಸೈನ್ಸ್ ಎಂಬ ಪುಸ್ತಕದಲ್ಲಿ ಈ ರೀತಿ ಹೇಳಿದ್ದಾರೆ

I will read from a Book written by Lambert, entitled Prison Sociology.

Mr. SPEAKER.—The hon. Member may better express the ideas in his own way. Sri Deo, who was not allowed when he read, may not like it. Fortunately he is not here now.

Sri C. J. MUCKANNAPPA.—I will only read some passages.

"The acid test of the prison is its programme and philosophy. A programme without philosophy and without definite objective is empty of value. An administration with an idea or sense of direction is mere routine. A sound philosophy of prison management will result in finding a balance between the demands of custody and the individual's need for correction and rehabilitation."

(SRI C. J. MUCKANNAPPA)

ಜೈಲಿನಿಂದ ಬಂದಂಥವನು ಹೇಗಿರಬೇಕು ? ಏನು ಮಾಡಿದರೆ ಅವನು ಸಮಾಜಕ್ಕೆ ಭಾರ ಆಗದೇ ಜೀವನ ನಡೆಸುವಂತಾಗುತ್ತಾನೆ ಎಂದು ಇದರಲ್ಲಿ ಹೇಳಿದ್ದಾರೆ, ಸ್ವಾಮಿ.

"The temporary phase of the system developed from prime, basic ideas. The prison regime should attempt to give constructive training, moral, mental and vocational. Such training should be fully carried out only in homogenous establishments set aside for the purpose, though the principle should apply so far as practical, under the limitation of an ordinary prison. The special training prisons need not have all prisoners provided with the security of the normal prison building."

ವಿಷಯ ಹೇಳದೆ ಏನೋ ಭಾಷಣ ಮಾಡುತ್ತೇನೆ ಎಂದು ತಾವು ಹೇಳುತ್ತೀರಿ. ಜೈಲಿನಿಂದ ಬಂದಂಥವನನ್ನು ರೀಹ್ಯಾಬಿಲಿಟೇಟ್ ಮಾಡುವುದಕ್ಕೆ ಅವನ ಜೀವನವನ್ನು ಉತ್ತಮಪಡಿಸುವುದಕ್ಕೆ ಏನನ್ನಾದರೂ ಮಾಡಿದ್ದೀರಾ ? ಈ 6? ಕಲಂಗಳಲ್ಲಿ ಚಕಾರ ಶಬ್ದ ಇದೆಯೇ ? ಏನೂ ಇಲ್ಲ. ಬೇಡ ಸ್ವಾಮಿ, ಒಂದು ಕಾನೂನು ಮಾಡುತ್ತೇವೆ ಎಂದು ಸಮಾಜದ ಸಂಸ್ಕೃತಿಗಳಿವೆ ಕ ನ್ಯಾಯ ಮಂತ್ರಿಗಳು ಒಂದು ಒಳ್ಳೆಯ ಭಾಷಣವನ್ನು ಮಾಡಿದರು. ಇದನ್ನು ಏಕೆ ಹಿಂದಕ್ಕೆ ತೆಗೆದುಕೊಳ್ಳಬೇಕು ಎನ್ನುವುದಕ್ಕೆ ಇನ್ನೊಂದು ಅಂಶವನ್ನು ಓದಿ ಹೇಳುತ್ತೇನೆ.

Sri V. M. DEO.—Can the Hon. Member read extensively, Sir? (*Laughter*).

Sri C. J. MUCKANNAPPA.—I have finished Sir.

ಸರ್ಕಾರದವರು ಅರಿಕೆ ಮಾಡಿಕೊಳ್ಳುವುದೇನೆಂದರೆ ದೇಶದ ಜೈಲಿಗೆ ಹೋಗುವುದೇ ಒಂದು ವ್ಯವಸ್ಥೆಯಾಗಿದೆ. ಶಿಕ್ಷೆಯಾದವನನ್ನು ಅಲ್ಲಿ ತುಂಬುವುದು ಮತ್ತೆ ಬಿಡುವುದು ಮತ್ತೆ ಜೈಲಿಗೆ ಹಾಕುವುದು ಇದೇ ಒಂದು ಕೆಲಸವಾಗುವುದಾದರೆ ಸೋಷಿಯಲ್ ರಿಫಾರಂ ಮಾಡುವುದಕ್ಕೆ ಸಾಧ್ಯವೇ ? ಆದ್ದರಿಂದ ತಡವಾದರೂ ಚಿಂತೆಯಿಲ್ಲ 5 ರಾಜ್ಯಗಳ ರೀತಿ ಕಾನೂನು 5 ತರಹ ಇದ್ದರೂ ಚಿಂತೆಯಿಲ್ಲ ಇವತ್ತಿನ ದಿವಸ ಎಷ್ಟು ಮಟ್ಟಿಗೆ ಜೈಲುಗಳ ಸುಧಾರಣೆಯಾಗಬೇಕು, ಜೈಲುಗಳು ಹೇಗೆ ಇರಬೇಕು ಎಂಬುದನ್ನು ಕಂಡುಹಿಡಿಯುವುದಕ್ಕೆ ಒಂದು ಜೈಲ್ಸ್ ರಿಫಾರಂಸ್ ಕಮಿಟಿಯನ್ನು ಮಾಡಿ ಅವರ ಸಲಹೆಯನ್ನು ತೆಗೆದುಕೊಂಡು ಹೊಸದಾದ ಒಂದು ಕಾನೂನು ಮಾಡುವುದು ಸರಿಯಾಗಿ ಕಾಣುತ್ತದೆ ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ (ಗಾಂಧಿನಗರ).—ಮಾನ್ಯ ಸಭಾಪತಿಗಳೇ, ವಿಶಾಲ ಮೈಸೂರಿನ ಎಲ್ಲ ಬಂದೀಖಾನೆಗಳಿಗೂ ಏಕರೂಪತೆಯ ಶಾಸನವಿರಬೇಕೆಂದು ತಂದಿರುವ ಈ ವಿಧೇಯಕವನ್ನು ಸ್ವಾಗತಿಸುವ ಮುನ್ನ ಕೆಲವು ಸಲಹೆಗಳನ್ನು ಕೊಡಬೇಕೆಂದಿದ್ದೇನೆ. ಜೈಲಿನ ಅನುಭವ ಅದರಲ್ಲಿಯೂ ಬ್ರಿಟಿಷ್ ಆಡಳಿತದಲ್ಲಿದ್ದಾಗಿನ ಬಂದೀಖಾನೆಗಳಲ್ಲಿನ ಕಷ್ಟದ ಪರಿಸ್ಥಿತಿಯನ್ನು ನೋಡಿ ಆಶ್ಚರ್ಯವೆನಿಸುತ್ತದೆ. ಆಗಿನ ಜೈಲು ವಾಸ ನಿಜವಾಗಿಯೂ ಕೂಡ ನರಕ ಸದೃಷವಾಗಿತ್ತು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಜೈಲಿನ ಪಕ್ಕದಲ್ಲಿದ್ದೋ ಅಥವಾ ಜೈಲಿನ ಒಳಗಿದ್ದೋ ?

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ಜೈಲಿನ ಪಕ್ಕದಲ್ಲಿದ್ದು ಅವರಿಗೆ, ಜೈಲಿನ ಒಳಗಿದ್ದುದು ನನಗೆ. ಆಗ ಖೈದಿಗಳ ಊಟಕ್ಕೆ ಕೊಡುತ್ತಿದ್ದ ಆಹಾರ, ಮಡಕೆ, ಕುಡಿಕೆಗಳು, ಹಾಸಲು ಕೊಡುತ್ತಿದ್ದ ಗೋಣೀಚೀಲ, ಹೊದೆಯಲು ಕೊಡುತ್ತಿದ್ದ ಕಂಬಳಿಗಳು ಅವರ ಉಪಯೋಗಕ್ಕಿದ್ದ ಶೌಚ ದೂಪಗಳು ಅವರಿಗೆ ಕೊಡುತ್ತಿದ್ದ ದಂಡನೆಗಳು, ಕಿರುಕುಳಗಳನ್ನು ಯಮಧರ್ಮ ನೋಡಿದ್ದರೂ ಆತನೂ ಒಂದು ದಿನ ಸಹ ಜೈಲಿನಲ್ಲಿರಲು ಒಪ್ಪುತ್ತಿರಲಿಲ್ಲ. ಖೈದಿಗಳೆಂದರೆ, ರಾಜಕೀಯ ಖೈದಿಯೇ ಆಗಿರಲಿ, ಖೂನಿ, ದರೋಡೆ, ಕಳ್ಳತನ ಮಾಡಿದ ಖೈದಿಯೇ ಆಗಿರಲಿ ಎಲ್ಲರೂ ಪಾಪಿಗಳೆಂದೇ ಪರಿಗಣಿಸಲ್ಪಟ್ಟಿದ್ದರು. ಮನುಷ್ಯನ ಮಾನವತೆಯೇ ಮಂಕಾಗುವಂತಹ, ಮಾನವ ರಾಕ್ಷಸನಂತಾಗುವ ದಂಡನೆಗಳು ಬೇಕಾದಷ್ಟು ಕಿರುಕುಳಗಳು ಖೈದಿಗಳಿಗಿದ್ದವು. ಈಗ ಜೈಲುಗಳಲ್ಲಿ ತುಂಬಾ ಪರಿವರ್ತನೆಯಾಗಿದೆ. ಖೈದಿಗಳನ್ನು ಎಲ್ಲಾ ಮಾನವರಂತೆ ನೋಡುವ ಮನೋಭಾವ ಬಂದಿದೆ ಎಂಬುದು ಸಂತೋಷ ಪಡುವ ವಿಚಾರ ಆದರೂ ನಮ್ಮ ಜೈಲುಗಳು ಜೈಲಿನ ಕಾನೂನುಗಳು

ಪಾಶ್ಚಾತ್ಯ ರಾಜ್ಯಗಳಲ್ಲಿನ ಮಟ್ಟಕ್ಕೆ ಬಂದಾಗ ಮಾತ್ರ ನಾವು ತುಂಬಾ ಸಮಾಧಾನ ಪಡಬಹುದು. ನಮ್ಮ ಸರ್ಕಾರದವರು ಖೈದಿಗಳ ಉತ್ತರೋತ್ತರ ಉನ್ನತಿಗೆ ನೆರವಾಗುವಂತಹ ಕಾನೂನುಗಳನ್ನು ಕ್ರಮೇಣ ಮಾಡುತ್ತಾ ಹೋಗಲೆಂದು ವಿನಂತಿಸುತ್ತೇನೆ. ಯಾವ ಸರ್ಕಾರವೇ ಇರಲಿ, ಯಾವ ಸರ್ಕಾರವೇ ಬರಲಿ, ಬಂದೀಖಾನೆಗಳೂ, ಬಂದೀಖಾನೆಗಳಿಗೆ ಸಂಬಂಧಿಸಿದ ವಿಧೇಯಕಗಳೂ ಇರಲೇ ಬೇಕು. ಶಾಸನಗಳನ್ನು ಉಪಯೋಗಿಸುವವರ ಕೈಯ್ಯಲ್ಲಿರುತ್ತದೆ. ಅವುಗಳ ಸದುಪಯೋಗ ಇಲ್ಲವೇ ದುರುಪಯೋಗ. ಅಧಿಕಾರಿಗಳು ಚಾಣಕ್ಷರಿದ್ದು, ಆಯಾಯ ಖೈದಿಗಳ ಮನೋಭಾವ ಹನ್ನರಿತು ಯುಕ್ತಿಯಿಂದ ನಡೆದಲ್ಲಿ ಈ ವಿಧೇಯಕದಲ್ಲಿರುವ ಕೆಲವು ದಂಡನೆಯ ಕಾನೂನುಗಳನ್ನು ಪ್ರಯೋಗ ಮಾಡುವ ಪ್ರಸಂಗವೇ ಬರಲಿಕ್ಕಿಲ್ಲ. ಸಾಮ, ದಾನ, ಭೇದ ಬಲ್ಲ ಅಧಿಕಾರಿಯು ದಂಡ ಪ್ರಯೋಗವನ್ನು ಮಾಡತಕ್ಕ ಪ್ರಸಂಗವನ್ನೇ ತಂದುಕೊಳ್ಳಲಾರ, ಖೈದಿಗಳನ್ನು ಕಾನೂನಿನಿಂದಲೇ ಆಳಬೇಕೆಂಬ ಅಧಿಕಾರಿ ಇದ್ದಲ್ಲಿ, ಖೈದಿ ರಾಕ್ಷಸನಾಗುತ್ತಾನೆ, ಬಂದೀಖಾನೆ ನರಕ ಖಾನೆಯಾಗುತ್ತದೆ, ಅಧಿಕಾರಿ ಯಮಧರ್ಮನಾಗುತ್ತಾನೆ. ಜೈಲಿನ ಆಡಳಿತವರ್ಗ ಈ ರೀತಿ ಆಗದೆ ತಮಗೆ ಲಭ್ಯವಾಗಿರುವ ಕಾನೂನುಗಳನ್ನು ಸದುಪಯೋಗಪಡಿಸಿಕೊಳ್ಳಲೆಂಬುದಕ್ಕಾಗಿ ಈ ವಿಚಾರ ಹೇಳುತ್ತಿದ್ದೇನೆ.

ಈಗೀಗ ಮರಣದಂಡನೆ ಕಡಿಮೆಯಾಗುತ್ತಿರುವುದು ಜೈಲುಶಾಸನಗಳಲ್ಲಿ ಒಂದು ಶುಭ ಚಿಹ್ನೆಯೆಂದೇ ಹೇಳಬೇಕು. ಆಜೀವ ಶಿಕ್ಷೆಯನ್ನು ಅನುಭವಿಸುವವರು ಹೇರಳವಾಗಿರುತ್ತಾರೆ. ಆಜೀವ ಶಿಕ್ಷೆಗಳಿಗೆ ಗುರಿಯಾಗಿರುವ ಖೈದಿಗಳ ಅಪರಾಧಗಳು ನಾನಾ ನಮೂನೆ ಇರುತ್ತವೆ, ಅಪರಾದ ಉದ್ದೇಶ ಪೂರ್ವಕವಾಗಿ ಮಾಡಿದ್ದೇ, ಕ್ಷಣಿಕ ಆವೇಶದಲ್ಲಿ ಮಾಡಿದ್ದೇ ಎಂದು ನೋಡಬೇಕು. ಖೈದಿಯ ಸಂಸ್ಕೃತಿ, ನಡೆ, ನುಡಿ, ಹಾಗೂ ಅವರ ರೀತಿ ನೀತಿಗಳನ್ನು ನೋಡಿ, ಆಜೀವ ಶಿಕ್ಷೆ ಅನುಭವಿಸುವ ಖೈದಿ ಅಂತಹ ಉತ್ತಮ ಸಂಸ್ಕೃತಿಯುಳ್ಳವನಾಗಿದ್ದರೆ, ಆ ಖೈದಿ 10 ವರ್ಷ ಶಿಕ್ಷೆ ಅನುಭವಿಸಿದ ಮೇಲೆ ಅಂತಹವರನ್ನು ಬಿಟ್ಟುಬಿಡಬೇಕೆಂಬ ಒಂದು ಕಡ್ಡಾಯ ನಿಯಮ ಈ ಶಾಸನದಲ್ಲಿ ಇರಬೇಕಾಗಿತ್ತು. ಈಗ ಇದು ಸರ್ಕಾರದವರ ದಯಾ ದಾಕ್ಷಿಣ್ಯದ ಮೇಲೆ ನಡೆಯುತ್ತಿದೆ. ನಾನು ಬೆಂಗಳೂರಲ್ಲಿರುವ ಸೆಂಟ್ರಲ್ ಜೈಲಿನ ಸ್ಟ್ಯಾಂಡಿಂಗ್ ಅಡ್ವೈಜರಿ ಕಮಿಟಿಯ ಸದಸ್ಯನಾಗಿದ್ದೇನೆ. ಅಜೀವ ಶಿಕ್ಷೆಗೊಳಗಾಗಿ ಹತ್ತು ವರ್ಷ ಶಿಕ್ಷೆ ಅನುಭವಿಸಿರುವ ಉತ್ತಮ ನಡತೆಯ ಖೈದಿಗಳನ್ನು ಖುಲಾಸೆ ಮಾಡಬಹುದೆಂದು ಸಮಿತಿ ತೀರ್ಮಾನವನ್ನು ಸರ್ಕಾರಕ್ಕೆ ಕಳುಹಿಸಿ ಸಾಕಷ್ಟು ಕಾಲವಾಗಿದ್ದರೂ ಆ ಬಗ್ಗೆ ಸರ್ಕಾರದಿಂದ ಇನ್ನೂ ಉತ್ತರ ಬಂದಿಲ್ಲ. ಹೀಗೆ ವಿಳಂಬವಾದರೆ ಕಾನೂನು ಪಾಲನೆಗಳ ಬಗ್ಗೆ ನಿರ್ಲಕ್ಷತೆ ತೋರಿಸಿದಂತೆ ಆದೀತೇನೋ ಎಂಬ ಒಂದು ಭಾವನೆ ಸಹಜವಾಗಿಯೇ ಬರುತ್ತದೆ. ನಾನು ಪಂಚರಂಗಿ ಖೈದಿಗಳಮಾತು ಹೇಳುತ್ತಿಲ್ಲ. ಅವರಿಗೆ ಜೈಲೇ ಮನೆ. ಆಜೀವ ಶಿಕ್ಷೆಗೆ ಗುರಿಯಾಗಿ ಹತ್ತು ವರ್ಷಗಳ ಮೇಲೆ ಶಿಕ್ಷೆ ಅನುಭವಿಸಿರುವ, ಆಕಸ್ಮಾತ್ ಸನ್ನಿವೇಶಗಳಿಗೆ ಸಿಕ್ಕಿ ಅಪರಾಧ ಮಾಡಿರುವ ಒಳ್ಳೇ ರೀತಿ ನೀತಿ ಇರುವ ಖೈದಿಗಳ ಬಗ್ಗೆ ಹೇಳುತ್ತಿದ್ದೇನೆ. ಇಂಥಹ ಖೈದಿಗಳ ಬಿಡುಗಡೆಯ ಬಗ್ಗೆ ಹೇಳುತ್ತಿದ್ದೇನೆ. ಇಂಥಹ ಖೈದಿಯ ಬಿಡುಗಡೆಯ ಬಗ್ಗೆ ಸರ್ಕಾರ ಉದಾರತೆಯಿಂದ ವರ್ತಿಸಬೇಕಾಗಿ ವಿನಂತಿಸುತ್ತೇನೆ.

ಇನ್ನೊಂದು ವಿಚಾರ, ಬಿಡುಗಡೆ ಹೊಂದಿದ ಖೈದಿಗಳ ಸಹಾಯ ಸಂಸ್ಥೆ (ರಿಲೀಜ್ಡ್ ಪ್ರಿಜನರ್ಸ್ ಎಯಿಡ್ ಸೊಸೈಟಿ) ಎಂದು ಒಂದು ಸಂಸ್ಥೆ ಇರುವುದನ್ನು ಕೇಳಿದ್ದೇನೆ. ಆ ಸಂಸ್ಥೆಯ ಬಗ್ಗೆ ಸರ್ಕಾರ ಹೆಚ್ಚು ನಿಗಾ ಕೊಟ್ಟು ಕಾರ್ಯೋನ್ಮುಖವಾಗುವಂತೆ ಮಾಡಿದಲ್ಲಿ ಬಿಡುಗಡೆ ಹೊಂದಿದ ಖೈದಿಗಳಿಗೆ ಆ ಸಂಸ್ಥೆ ಕಲ್ಪವೃಕ್ಷದಂತಾಗುವುದು. ಆ ಸಂಸ್ಥೆಯನ್ನು ಸರ್ಕಾರದ ಅಂಗಸಂಸ್ಥೆಯಲ್ಲೊಂದಾಗಿ ಮಾಡಿಕೊಂಡು ಬಿಡುಗಡೆಯಾದ ನಿರ್ಗತಿಕ, ನಿರಾಶ್ರಿತ, ಯೋಗ್ಯ ಖೈದಿಗಳಿಗೆ ವೃತ್ತಿ ಕೈಗೊಳ್ಳಲು ಸಹಾಯ ಮಾಡಿ ಅವರು ಉತ್ತಮ ನಾಗರಿಕರಾಗುವಂತೆ ಮಾಡಲೆಂದು ಹಾರೈಸುತ್ತೇನೆ. ಜೈಲಿನಲ್ಲಿ ಕುಶಲ ಕೈಗಾರಿಕೆ ಕಲಿತವರು, ಇಷ್ಟವಿದ್ದವರು ಬಿಡುಗಡೆಯಾದ ನಂತರ ಖೈದಿಗಳ ಸಹಾಯಕ ಸಂಸ್ಥೆಯ ಆಶ್ರಯದಲ್ಲಿ ಜೀವನ ಸಾಗಿಸುವಂತಾಗಲೀ ಎಂಬುದಕ್ಕಾಗಿ ಈ ವಿಚಾರ ತಮ್ಮ ಮುಂದೆ ಇಟ್ಟಿದ್ದೇನೆ. ಇದೊಂದು ರಾಷ್ಟ್ರೀಯ ಕಲ್ಯಾಣ ಕಾರ್ಯ ಈ ಬಗ್ಗೆ ಸರ್ಕಾರ ಹೆಚ್ಚು ಧನಸಹಾಯ ಮಾಡಿ ವ್ಯವಸ್ಥಿತ ಸಂಸ್ಥೆಯಾಗುವಂತೆ ಮಾಡಲೆಂದು ಅಪೇಕ್ಷಿಸುತ್ತೇನೆ.

ಒಂದು ಆಶ್ಚರ್ಯದ ವಿಚಾರವನ್ನು ಹೇಳಬೇಕಾಗಿದೆ. ದೇಶದ ಭದ್ರತೆ, ಸ್ವಾತಂತ್ರ್ಯರಕ್ಷಣೆ ಮತ್ತು ನೈತಿಕ ಮಟ್ಟವನ್ನು ಕಾಪಾಡುವ ಬಂದೀಖಾನೆಗಳ ಸುಧಾರಣೆಗಾಗಿ ಪಂಚವಾರ್ಷಿಕ ಯೋಜನೆಯಲ್ಲಿ ಅವಕಾಶ ಕಲ್ಪಿಸದೆ ಇರುವುದು ತುಂಬಾ ಶೋಚನೀಯ. ಕಾನೂನುಗಳು ಎಷ್ಟು ಬಿಗಿಯಾಗಿರುತ್ತವೆಯೋ, ಅವನ್ನು ಪಾಲಿಸತಕ್ಕ ಅಧಿಕಾರಿಗಳಿಗೆ, ನೌಕರರುಗಳಿಗೆ, ಸಂಬಂಧಪಟ್ಟವರಿಗೆ ಅಷ್ಟೇ ಸೌಕರ್ಯಗಳನ್ನು ಒದಗಿಸಬೇಕಾದ್ದು ಸರ್ಕಾರದ ಸಹಜ ಧರ್ಮ. ಖೈದಿಗಳ ಮಧ್ಯೆ ಒಡನಾಟ ಮಾಡತಕ್ಕ ಅಧಿಕಾರಿಗಳ ನೌಕರರ ಸಂಬಳ ಸಾರಿಗೆಗಳು ತೃಪ್ತಿಕರವಾಗಿರಬೇಕು.

(ಶ್ರೀಮತಿ ನಾಗರತ್ನಮ್ಮ ಹಿರೇಮಠ)

ಅಲ್ಲಿ ಕೆಲಸ ಮಾಡುವ ವಾರ್ಡರ್‌ಸ್‌ಗಳಿಗೆ ಕೇವಲ 60 ರೂ ಸಂಬಳ ಕೊಡುತ್ತಿದ್ದೀರಿ. ಹೀಗಿದ್ದರೆ ಜೈಲಿನಲ್ಲಿ ಅಷ್ಟು ಬಿಕ್ಕಟ್ಟಿನ ಕಾನೂನುಗಳಿದ್ದರೂ ಅಕ್ರಮಗಳು ನಡೆಯಲು ಅಲ್ಲಿ ಸಂಬಳ ಸಾರಿಗೆಗಳು ತೃಪ್ತಿಕರವಾಗಿಲ್ಲದಿರುವುದೇ ಕಾರಣವಿರಬೇಕೆಂದು ನಾನು ಭಾವಿಸಿದ್ದೇನೆ. ಅಗ್ಗದ ಶೆಟ್ಟಿ-ಮುಗ್ಗಿದ ಜೋಳ, ಎಂಬಂತೆ ಸಂಬಳ ಹಿಡಿತವಾದರೆ ಕೆಲಸದಲ್ಲಿ ಕಡಿತವಾಗುವುದು ಸ್ವಾಭಾವಿಕ. ಕಾರಣ ಜೈಲಿನ ನೌಕರರ, ಅಧಿಕಾರಿಗಳ ಸಂಬಳ ಸಾರಿಗೆಗಳ ಬಗ್ಗೆ ವಿಮರ್ಶೆ ಮಾಡಿ ಅವಶ್ಯವಿದ್ದ ಬದಲಾವಣೆ ಮಾಡಬೇಕೆಂದು ಕೋರುತ್ತೇನೆ.

ಖೈದಿಗಳಲ್ಲಿ ವ್ಯವಸಾಯು ಬಲ್ಲವರು ತುಂಬಾ ಇರುತ್ತಾರಾದ್ದರಿಂದ ಉತ್ತರ ಪ್ರದೇಶ, ಕೇರಳಗಳಲ್ಲಿ ಮಾಡಿರುವಂತೆ ಇವರಿಗಾಗಿ ಒಂದು ಪ್ರತ್ಯೇಕ ಅಗ್ರಿಕಲ್ಚರ್ ಕಾಲೋನಿ ಏರ್ಪಡಿಸಿ ವ್ಯವಸಾಯು ಬಲ್ಲ ಖೈದಿಗಳನ್ನು ಅಲ್ಲಿ ಕೆಲಸಕ್ಕೆ ನೇಮಿಸಿದಲ್ಲಿ ಲಾಭದಾಯಕವಾದ ರೀತಿಯಲ್ಲಿ ಬೆಳೆಯನ್ನು ಬೆಳೆಯಲು ಅನುಕೂಲವಾಗುತ್ತದೆ. ಈ ಒಂದು ಕಾರ್ಯಕ್ರಮವನ್ನು ಕೈಗೊಳ್ಳುವುದು ಸೂಕ್ತವೆಂದು ಹೇಳಬಯಸುತ್ತೇನೆ.

ಹಾಲಿ ದೇಶದಲ್ಲಿರುವ ಮುಖ್ಯ ಬಂದೀಖಾನೆಗಳಲ್ಲಿ ನಾನಾ ನಮೂನೆಯ ಯಂತ್ರ ರಿಪೇರಿ ಬಗ್ಗೆ ಒಂದು ವರ್ಕ್‌ಷಾಪ್ ಮತ್ತು ರೈತುಗಳಲ್ಲಿ ಕೆಲಸ ಮಾಡುವುದನ್ನು ಕಲಿಸಿದರೆ ಕುಶಲಮತಿಗಳಾದಂಥ ಖೈದಿಗಳು ಅಲ್ಲಿ ತರಪೇತು ಪಡೆದು ಬಿಡುಗಡೆಯಾದನಂತರ ತಮ್ಮ ಜೀವನ ನಿರ್ವಹಿಸಲು ಅನುಕೂಲವಾಗುತ್ತದೆ. ಈ ಬಗ್ಗೆ ಕೂಡ ಸರ್ಕಾರ ಯೋಚನೆ ಮಾಡಬೇಕು. ಎಷ್ಟೋ ಜನ ಖೈದಿಗಳು ತಾವು ಮಾಡಿದ ಕೆಲಸದಿಂದ ಬಂದ ಕೂಲಿ ಹಣವನ್ನು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಮನೆಗಳಿಗೆ ಕಳುಹಿಸುತ್ತಾರೆ. ಸರ್ಕಾರ ಕೆರೆ, ಕಟ್ಟೆ, ಸೇತುವೆ—ಇಂತಹ ಕಾಂಗಾರಿ ಕೆಲಸಗಳನ್ನು ಮಾಡುವ ಕಡೆ ಖೈದಿಗಳನ್ನು ಉಪಯೋಗಿಸಿಕೊಳ್ಳುವುದು ಒಳ್ಳೆಯದು. ಇದರಿಂದ ಅವರಿಗೂ ಉಪಯೋಗವಾಗುತ್ತದೆ, ಸರ್ಕಾರಕ್ಕೂ ಅನುಕೂಲವಾಗುತ್ತದೆ. ಹೀಗೆ ಖೈದಿಗಳಿಗೆ ಅನುಕೂಲವಾಗುವ ಕಾರ್ಯಕ್ರಮಗಳನ್ನು ಸರ್ಕಾರ ಕೈಗೊಳ್ಳಬೇಕೆಂದು ವಿನಂತಿ ಮಾಡಿಕೊಂಡು ಈ ವಿಧೇಯಕವನ್ನು ನಾನು ಸ್ವಾಗತಿಸುತ್ತೇನೆ.

Mr. SPEAKER.—The House will now rise and re-assemble at 12-30 P.M. on Thursday, the 26th September 1963.

The House adjourned at Six of the Clock to meet again at Thirty Minutes past Twelve of the Clock on Thursday, the 26th September 1963.

WD 1244—GPB—900—10-12-63.